ಉದಯವಾಣಿ ಸೋಮವಾರ 20 ಜನವರಿ 2014







# ನೀವು ಖರ್ಚುದಾರರೋ ಷೇರುದಾರರೋ

## ಈಗಲಾದರೂ ನಿರ್ಧರಿಸಿ...

## ಗ್ರಾಹಕ ವರ್ಸಸ್ ಮಾಲಿಕ

**ನೀವು ಸುಮ್ಮನೆ ಷೇರು ಕೊಂಡು ಸಾಮಾನ್ಯ ಗ್ರಾಹಕರಾಗಲು ಬಯಸುತ್ತೀರೋ ಅಥವಾ ಯೋಜಿತವಾಗಿ ಹೂಡಿಕೆ ಮಾಡಿ ಭಾರತೀಯ ಷೇರು ಕಂಪೆನಿಗಳ ಮಾಲೀಕರಾಗುತ್ತೀರೋ? ನೀವು ಖರ್ಚುದಾರರಾಗಿದ್ದರೆ ನನ್ನಂಥ ಷೇರುದಾರರಿಗೆ ಮಾತ್ರ ಲಾಭ. ನೀವು ಖರ್ಚುದಾರರಾಗಿದ್ದರೆ ಥ್ಯಾಂಕ್ಯು, ಹೂಡಿಕೆ ದಾರರಾಗಿದ್ದಾರೆ ಆಲ್ ದಿಬೆಸ್ಟ್. 2014 ಹೊಸ ವರುಷ ಇಂಥ ಆಯ್ಕೆ ನಿಮ್ಮ ಮುಂದಿಟ್ಟಿದೆ. ಯಾವುದನ್ನು ಆಯ್ಕೆ ಮಾಡಿ ಕೊಳ್ಳುತ್ತೀರೋ ನಿಮಗೆ ಬಿಟ್ಟಿದ್ದು.**

■ ಸಂದೀಪ್ ಜೆ. ಪಿಸ್ಸೆ

ಷೇರುಗಳ ಖರೀದಿ ಹಾಗೂ ಮ್ಯೂಚುವಲ್ ಫಂಡ್ಗಳಲ್ಲಿ ಹೂಡಿಕೆಯನ್ನು ಮಾಡಿ ಆರ್ಥಿಕವಾಗಿ ಅಭಿವೃದ್ಧಿಯನ್ನು ಹೊಂದಿರಿ ಎಂದು ಹೂಡಿಕೆದಾರರಿಗೆ ಮಾಡಿದ ಸಲಹೆ ನೀರಿನ ಮೇಲೆ ಮಾಡಿದ ಹೋಮದಂತಾಗಿದೆ. 2001ರಲ್ಲಿ ಭಾರತೀಯ ಜನತೆ ಷೇರು ಬಂಡವಾಳದಲ್ಲಿ ಶೇ.22ರಷ್ಟನ್ನು ಹೊಂದಿದ್ದರೆ ದೇಶಿ ಹೂಡಿಕೆದಾರರು ಶೇ.14ರಷ್ಟು ಹೊಂದಿದ್ದರು. ಆದರೆ ಈಗಿನ ಪರಿಸ್ಥಿತಿ? ಅದಕ್ಕೆ ತದ್ವಿರುದ್ಧ! ದೇಶಿ ಹೂಡಿಕೆದಾರರು ಶೇ.22ರಷ್ಟನ್ನು ಹೊಂದಿದ್ದರೆ ಭಾರತೀಯರ ಪಾಲು ಶೇ.14ರಷ್ಟು ಮಾತ್ರ.

ಒಬ್ಬ ಹೂಡಿಕೆದಾರನಾಗಿ ಇದನ್ನು ಇಷ್ಟಪಡುತ್ತೇನೆಯೇ? ನಾನು ಓರ್ವ ಪಕ್ಕಾ ಸ್ವಾರ್ಥಿಯಾಗಿ ಹೇಳುವುದಾದರೆ ನೀವೆಲ್ಲರೂ ಷೇರು ಮಾರುಕಟ್ಟೆಯಿಂದ ಬಲು ದೂರ ಓಡಿಹೋದರೂ ನನಗೇನೂ ಬೇಸರವಿಲ್ಲ. ಕಡಿಮೆ ಬಡ್ಡಿ ಗಳಿಸುವ ಉಳಿತಾಯ ಖಾತೆಗಳಲ್ಲಿ ನಿಮ್ಮ ಹಣವನ್ನು ಇಡಿ. ಬ್ಯಾಂಕುಗಳು ತಮ್ಮ ಠೇವಣಿಗಳನ್ನು ಜಾಸ್ತಿ ಮಾಡಿಕೊಳ್ಳಲಿ. ನೀವು ನಿಗದಿತ ಠೇವಣಿಗಳಲ್ಲಿ ಹಾಗೂ ಉಳಿತಾಯ ಖಾತೆಗಳಲ್ಲಿ ಶೇ.9 ಹಾಗೂ ಶೇ.4.5ರಷ್ಟು ತೆರಿಗೆ ಸಹಿತ ಬಡ್ಡಿಯನ್ನು ಪಡೆಯುತ್ತಿದ್ದರೆ ನಾನು ಎಚ್ ಡಿ ಎಫ್ ಸಿ ಅಥವಾ ಇಂಡಸ್ ಇಂಡ್ ಬ್ಯಾಂಕುಗಳ ಷೇರುಗಳನ್ನು ಹೊಂದಿರುತ್ತೇನೆ. ಅವು ನನಗೆ ಕ್ರಮವಾಗಿ ಮೂರೂವರೆ ಹಾಗೂ ಹನ್ನೊಂದುವರೆ ಪಟ್ಟು ಗಳಿಕೆಯನ್ನು ಡಿಸೆಂಬರ್ 2008 ರಿಂದ ನೀಡುತ್ತಿದೆ. ಖಾಸಗಿ ಬ್ಯಾಂಕುಗಳು ನೀಡಿರುವ ಸಾಲಗಳು ನಿಮಗೆ ತೊಂದರೆ ಕೊಡದಿರಲಿ ಎಂದು ನಿಮ್ಮ ಮಾಸಿಕ ಕಂತುಗಳನ್ನು ಕಟ್ಟಲು ಮರೆಯಬೇಡಿ. ಆದರೆ ನಾನು ಆ ಬ್ಯಾಂಕುಗಳ ಷೇರುಗಳನ್ನು ಕೊಂಡಿರುವುದರಿಂದ ಸಂತೋಷವಾಗಿರುವಂತೆ ಮಾಡಿದೆ. ಹೂಡಿಕೆದಾರರಿಗೆ ಮ್ಯೂಚುವಲ್ ಫಂಡ್‌ಗಳಲ್ಲಿ ಆಸಕ್ತಿಯೇ ಹೋಗಿದ್ದು ಮ್ಯೂಚುವಲ್ ಫಂಡ್ ಕಂಪೆನಿಗಳಿಂದ ದಾಖಲೆಯ ಪ್ರಮಾಣದಲ್ಲಿ ಹಣ ಹೊರಹೋಗಿರುತ್ತದೆ. ಹೂಡಿಕೆದಾರರು ಸಂಪೂರ್ಣವಾಗಿ ಷೇರು ಮಾರುಕಟ್ಟೆಯಿಂದ ಹೊರನಡೆದಿದ್ದಾರೆ.

### ಹಾಗಾದರೆ ತಮ್ಮ ಹಣವನ್ನು ಎಲ್ಲಿ ಹೂಡಿಕೆ ಮಾಡುತ್ತಿದ್ದಾರೆ?



ರಿಯಲ್ ಎಸ್ಟೇಟ್ನಲ್ಲಿ? ಅದ್ಭುತ... ಅತಿ ಅದ್ಭುತ!... ಎಚ್‌ಡಿಎಫ್‌ಸಿ, ಎಲ್‌ಐಸಿ ಗೃಹ ನಿರ್ಮಾಣ ಫೈನಾನ್ಸ್ ಅಥವಾ ಕ್ಯಾನ್ ಫಿನ್ ಹೋಮ್ಸ್ ಮುಂತಾದವುಗಳಿಂದ ತಮ್ಮ ಆಸ್ತಿಯನ್ನು ಅಡವಿಟ್ಟು ರಿಯಲ್ ಎಸ್ಟೇಟನ್ನು ಖರೀದಿಸಿ ಇಲ್ಲವಾದರೆ ಎಚ್‌ಡಿ ಎಫ್‌ಸಿ, ಎಲ್ ಐಸಿ ಗೃಹನಿರ್ಮಾಣ ಫೈನಾನ್ಸ್ ಅಥವಾ ಕ್ಯಾನ್ ಫಿನ್ ಹೋಮ್ಸ್ ಷೇರುಗಳನ್ನು ಖರೀದಿಸಿ. ಕಳೆದ ಐದು ವರ್ಷಗಳಲ್ಲಿ ನಾನು ಹೇಗೆ ಕ್ರಮವಾಗಿ 2.5, 4.5 ಮತ್ತು 3.5 ಪಟ್ಟು ಲಾಭವನ್ನು ಗಳಿಸುತ್ತಿದ್ದೆ? ನಿಮಗೆ ನಾನು ಆಭಾರಿಯಾಗಿದ್ದೇನೆ.

ಒಂದು ವಿಷಯವನ್ನು ನೆನಪಿಟ್ಟುಕೊಳ್ಳಿ. ನೀವು ಮನೆಯನ್ನು ಅಥವಾ ವಿಲ್ಲಾವನ್ನು ಖರೀದಿಸುವಾಗ ಅತ್ಯುತ್ತಮವಾದ ಹಾಗೂ ಉತ್ತಮ ಗುಣಮಟ್ಟದ ಸಿಮೆಂಟ್ ಹಾಗೂ ಸ್ಯಾನಿಟರಿ ವೇರ್‌ಗಳನ್ನು ಬಳಸಲು ಹೇಳಿ. ಇಲ್ಲದಿದ್ದರೆ 200ರಿಂದ ನಾನು ಎಸಿಸಿ ಸಿಮೆಂಟ್ ಮತ್ತು ಹಿಂದೂಸ್ತಾನ್ ಸ್ಯಾನಿಟರಿವೇರ್‌ಗಳಲ್ಲಿ ಎರಡು ಪಟ್ಟು ಮತ್ತು ಐದರಷ್ಟು ಲಾಭವನ್ನು ಹೇಗೆ ಗಳಿಸಲು ಸಾಧ್ಯವಾಗುತ್ತಿತ್ತು? ಮನೆಯನ್ನು ಕಟ್ಟಿದರೆ ಅಥವಾ ಖರೀದಿಸಿದರೆ ಸಾಕೇ? ಮನೆಗೆ ಸುಂದರವಾದ ಬಣ್ಣವನ್ನು ಹೊಡೆಸಬೇಕಲ್ಲವೇ? ಉತ್ತಮವಾದ ಬಣ್ಣ ಬೇಕೇ ಬೇಕು ತಾನೆ? ಉತ್ಕೃಷ್ಟ ಮಟ್ಟದ ಪೈಂಟನ್ನೇ ಬಳಕೆ ಮಾಡಿ ನಾನಂತೂ ಕಳೆದ ಐದು ವರ್ಷಗಳಲ್ಲಿ ಐದೂವರೆ ಪಟ್ಟು ಲಾಭವನ್ನು ಪೈಂಟಿಂಗ್ ಷೇರುಗಳಲ್ಲಿ ಗಳಿಸಿದ್ದೇನೆ. ನನ್ನ ಸಂಪತ್ತಿನ ವೃದ್ಧಿಯಲ್ಲಿ ಅದರ ಕೊಡುಗೆ ಗಮನಾರ್ಹ.

### ಬುಲೆಟ್‌ನಲ್ಲಿ ಮಹಾರಾಜನಂತೆ ಓಡಾಡಬೇಕೇ?

ಈಗಲೇ ಬುಕ್ ಮಾಡಿ ವೈಟಿಂಗ್ ಲಿಸ್ಟ್ ನಲ್ಲಿ ನಿಮ್ಮ ಹೆಸರನ್ನು ನಮೂದಿಸಿಕೊಳ್ಳಿ. ಬುಲೆಟ್ ಬೈಕಿನ ಉತ್ಪಾದಕರಾದ ಐಷರ್ ಮೋಟಾರ್ಸ್‌ನ ಷೇರುಗಳು ನನಗೆ 2008 ರಿಂದ 21 ಪಟ್ಟು ಲಾಭವನ್ನು ತಂದು ಕೊಟ್ಟಿದೆ. ಸಂತೋಷವನ್ನು ಬಿಟ್ಟು ಜೀವನದಲ್ಲಿ ಇನ್ನೇನಿದೆ ಸ್ವಾಮಿ? ಜೀವನದಲ್ಲಿ ಪ್ರತಿಯೊಂದು ಸಣ್ಣ ಸಣ್ಣ ಸಂಗತಿಗಳನ್ನು ನಾವು ಅನುಭವಿಸಿ ಖುಷಿಪಡಬೇಕು. ಗೆಳೆಯ- ಗೆಳೆತಿಯರೊಂದಿಗೆ ಅಥವಾ ಕುಟುಂಬದವರೊಂದಿಗೆ ಯಾವುದಾದರೂ ಮಲ್ಟಿಪ್ಲೆಕ್ಸ್‌ಗೆ ಹೋಗಿ ಸುಂದರವಾದ ಸಿನಿಮಾವನ್ನು ನೋಡಿ ಕಾಲ ಕಳೆಯಿರಿ. ▶▶ಪುಟ 2

### ಅಡುಗೆ ಮನೆ ಸುಂದರವಾಗಿಟ್ಟು ಕೊಳ್ಳಿ

ನಿಮ್ಮ ಅಡುಗೆ ಮನೆಯನ್ನು ಸುಂದರವಾಗಿಟ್ಟುಕೊಳ್ಳಿ. ಉತ್ತಮ ಕ್ರಾಕರಿಗಳಿಂದ ಸುಂದರಗೊಳಿಸಿ. ಐದು ವರ್ಷಗಳಲ್ಲಿ ಟಿಟಿಕೆ ಪ್ರೆಸ್ಟೀಜ್ 24.5 ಪಟ್ಟು, ಹಾಕಿನ್ಸ್ ಶೇ.13.5 ಹಾಗೂ ಲಾ ಓಪಲ್ ಶೇ.24ರಷ್ಟು ಲಾಭವನ್ನು ನೀಡಿದೆ. ನಿಮಗೆಲ್ಲರಿಗೂ ಅನಂತಾನಂತ ಧನ್ಯವಾದಗಳು. ಸಾಮಾನ್ಯ ಜನತೆ ಜೀವವಿಮೆಯನ್ನು ಖರೀದಿಸಲು ಇಷ್ಟಪಡುತ್ತಾರೆ. ಜೀವ ವಿಮೆ ಮತ್ತು ಹೂಡಿಕೆ ಇವೆರಡೂಲಾಭ ತನಗೆ ಸಿಗುತ್ತದೆ ಎಂದು ಅವರು ಭಾವಿಸಿದ್ದಾರೆ. ನಾನು ನಿಮ್ಮನ್ನು ದೂರುತ್ತಿಲ್ಲ. ನೀವು ಯಾವ ಕಂಪೆನಿಗಳ ಜೀವವಿಮೆಯನ್ನು ಖರೀದಿಸಿದ್ದೀರೋ ಅದೇ ಕಂಪೆನಿಗಳ ಷೇರುಗಳನ್ನು ನಾನು ಹೊಂದಿದ್ದೇನೆ. ಡಿಸೆಂಬರ್ 2009 ರಿಂದ ಬಜಾಜ್ ಫಿನ್ ಸರ್ವ್ ಐದೂವರೆ ಪಟ್ಟು ಹಾಗೂ ಮ್ಯಾಕ್ಸ್ ಇಂಡಿಯಾ ಎರಡು ಪಟ್ಟು ಲಾಭವನ್ನು ನೀಡಿದೆ.

ಸಾಮಾನ್ಯ ಜನತೆ ಇನ್ನೇನನ್ನು ಮಾಡಲು ಬಯಸುತ್ತಾರೆ? ಒಹ್! ಮರೆತೇ ಬಿಟ್ಟಿದ್ದೆ. ಷಾಪಿಂಗ್! 2008 ರಿಂದ ಫೀನಿಕ್ಸ್ ಮಿಲ್ಸ್ ಮೂರು ಪಟ್ಟು ಲಾಭವನ್ನು ಕೊಟ್ಟಿದೆ. ಪಾದರಕ್ಷೆಗಳನ್ನು ಖರೀದಿಸುತ್ತೀರಾ? ಅದೂ ಕೂಡಾ ಬ್ರಾಂಡೆಡ್! ನಾನು ಬಾಟಾ ಮತ್ತು ರಿಲಾಕ್ಸೋ ಕಂಪೆನಿ ಷೇರುಗಳನ್ನು ಹೊಂದಿದ್ದೇನೆ. ಡಿಸೆಂಬರ್ 2008ರಿಂದ ಅದು ಕ್ರಮವಾಗಿ 10 ಮತ್ತು 20 ಪಟ್ಟು ಲಾಭವನ್ನು ನೀಡಿದೆ. ಹಳೆಯ ಬೈಕು ಅಥವಾ ಕಾರನ್ನು ಕೊಟ್ಟು ಹೊಸ ಬೈಕೋ, ಕಾರನ್ನು ಖರೀದಿಸಬೇಕು ಎಂದು ಆಲೋಚಿಸಿದ್ದೀರಾ? ದಯವಿಟ್ಟು ಈಗಲಾದರೂ ಖರೀದಿಸಿ. ನಾನು ಮಾರುತಿ, ಬಜಾಜ್ ಹಾಗೂ ಹೀರೋ ಮೋಟರ್ಸ್ ಕಂಪೆನಿಗಳ ಷೇರುಗಳನ್ನು ಈಗಾಗಲೇ ಕೊಂಡಿದ್ದು 2008 ರಿಂದ ನನಗೆ ಅದು ಕ್ರಮವಾಗಿ ಮೂರೂವರೆ, ಹತ್ತು ಮತ್ತು ಎರಡೂವರೆ ಪಟ್ಟು ಲಾಭವನ್ನು ನೀಡಿದೆ. ■




■ ಸೀಮ

# ಟೀಕಾ ಪ್ರವೀಣರಿಗೆ ಚಿತ್ರ-ಪಾಠ

**ಇಲ್ಲಿ ಅದು ಸರಿಯಿಲ್ಲ, ಇದು ಸರಿಯಿಲ್ಲ ಎಂದು ಟೀಕೆ ಮಾಡುವುದು ಸುಲಭ. ಆದರೆ ಸರಿಯಿಲ್ಲದ್ದನ್ನು ಸರಿಪಡಿಸುವುದು ಕಷ್ಟ. ಬರೀ ಟೀಕಿಸುವವರು ಏನನ್ನೂ ಸರಿಪಡಿಸುವುದಿಲ್ಲ. ಹಾಗಾಗಿ ಅವರ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ.**

ಪ್ರಸಿದ್ಧ ಕಲಾವಿದನೊಬ್ಬನ ಬಳಿ ಐದು ವರ್ಷ ಕಷ್ಟಪಟ್ಟು ಪೇಂಟಿಂಗ್ ಕಲಿತ ಹುಡುಗನೊಬ್ಬ ಮನೆಗೆ ಬಂದವನೇ ತನ್ನ ಕಲೆಯನ್ನು ಒರೆಗೆ ಹಚ್ಚಲು ನಿರ್ಧರಿಸಿದ. ಅದಕ್ಕಾಗಿ ಮೂರು ದಿನ ಹಗಲು-ರಾತ್ರಿ ಕುಳಿತು ಸುಂದರ ಚಿತ್ರವೊಂದನ್ನು ಪೇಂಟ್ ಮಾಡಿದ. ಅದು ಚೆನ್ನಾಗಿದೆಯೋ ಇಲ್ಲವೋ ತಿಳಿಯುವುದು ಹೇಗೆ? ಪರಿಚಿತರಿಗೆ ತೋರಿಸಿದರೆ ತನ್ನ ಮೇಲಿನ ಪ್ರೀತಿಯಿಂದ ಚೆನ್ನಾಗಿದೆ ಎಂದೇ ಹೇಳುತ್ತಾರೆ. ಅದಕ್ಕೊಂದು ಉಪಾಯ ಮಾಡಿದ.

ಆ ಪೇಂಟಿಂಗನ್ನು ಸಿಟಿಗೆ ತಂದು ಮಾರ್ಕೆಟ್ ಬಳಿ ಒಂದು ಸ್ಟ್ಯಾಂಡ್ ಹಾಕಿ ಅಂಟಿಸಿದ. ಅದರ ಕೆಳಗೊಂದು ನೋಟ್ ಬರೆದ: 'ಸ್ನೇಹಿತರೆ, ನಾನೊಂದು ಚಿತ್ರ ಬಿಡಿಸಿದ್ದೇನೆ. ಈ ವೃತ್ತಿಗೆ ನಾನು ಹೊಸಬನಾದ ಕಾರಣ ಕೆಲವು ತಪ್ಪು ಮಾಡಿರಬಹುದು. ಹಾಗಾಗಿ ನಿಮಗೆ ಎಲ್ಲೆಲ್ಲಿ ತಪ್ಪುಗಳು ಕಾಣಿಸುತ್ತವೆಯೋ ಅಲ್ಲೆಲ್ಲ ಒಂದು ಗೀಟು ಹಾಕಿ.'



ಸಂಜೆ ಹೋಗಿ ನೋಡಿದಾಗ ಅವನಿಗೆ ಎದೆ ಒಡೆದುಹೋಯಿತು. ಚಿತ್ರವೇ ಕಾಣದಷ್ಟು ಗೀಟುಗಳು ಕ್ಯಾನ್ವಾಸ್ ಮೇಲಿದ್ದವು. ಅವನು ಬಿಡಿಸಿದ ಚಿತ್ರದಲ್ಲಿ ಜನರಿಗೆ ಬರೀ ತಪ್ಪುಗಳೇ ಕಾಣಿಸಿದ್ದವು. ಅದನ್ನು ನೋಡಿದ ಅವನು, ತನಗೆ ಚಿತ್ರಕಲೆ ಒಲಿದಿಲ್ಲ ಎಂದು ಬೇಸರದಿಂದ ಗುರುವಿನ ಬಳಿ ಬಂದ.

ಗುರು ಹೇಳಿದ: 'ಒಂದು ಕೆಲಸ ಮಾಡು. ಇದೇ ರೀತಿಯ ಇನ್ನೊಂದು ಚಿತ್ರ ಬಿಡಿಸು. ನೀನೊಬ್ಬ ಅದ್ಭುತ ಕಲಾವಿದ ಎಂಬುದನ್ನು ನಾನು ಪ್ರೂವ್ ಮಾಡುತ್ತೇನೆ.' ಶಿಷ್ಯನಿಗೆ ನಂಬಿಕೆ ಬರಲಿಲ್ಲ. ನಾನು ಹೇಳಿದಷ್ಟು ಮಾಡು ಎಂದ ಗುರು.

ಶಿಷ್ಯ ಆ ಹಳೆಯ ಚಿತ್ರದ ಯಥಾವತ್ತು ಇನ್ನೊಂದು ಚಿತ್ರ ಬರೆದ. ವಾರದ ನಂತರ ಅದನ್ನು ಗುರುವಿಗೆ ತೆಗೆದುಕೊಂಡು ಹೋಗಿ ಕೊಟ್ಟ. ಇಬ್ಬರೂ ಸಿಟಿ ಮಾರ್ಕೆಟ್‌ನ ಅದೇ ಜಾಗಕ್ಕೆ ಹೋದರು. ಅಲ್ಲಿ ಚಿತ್ರ ಅಂಟಿಸಿದ ಗುರು, ಅದರ ಕೆಳಗೊಂದು ನೋಟ್ ಬರೆದ: 'ಸ್ನೇಹಿತರೆ, ನಾನೊಂದು ಚಿತ್ರ ಬಿಡಿಸಿದ್ದೇನೆ. ಈ ವೃತ್ತಿಗೆ ನಾನು ಹೊಸಬನಾದ ಕಾರಣ ಕೆಲವು ತಪ್ಪು ಮಾಡಿರಬಹುದು. ಹಾಗಾಗಿ ನಿಮಗೆ ಏನೇನು ತಪ್ಪುಗಳು ಕಾಣಿಸುತ್ತವೆಯೋ ಅವುಗಳನ್ನೆಲ್ಲ ಇಲ್ಲಿರುವ ಬಣ್ಣ ಹಾಗೂ ಬ್ರಷ್‌ನಿಂದ ಸರಿಪಡಿಸಿ ಉಪಕಾರ ಮಾಡಿ.' ಪೇಂಟಿಂಗ್‌ನ ಕೆಳಗೇ ಬಣ್ಣಗಳ ಡಬ್ಬಿ ಹಾಗೂ ಬ್ರಷ್ ಇಡಲಾಗಿತ್ತು.

ವಾಪಸ್ ಬಂದ ಅವರಿಬ್ಬರೂ ಸಂಜೆ ಮರಳಿ ಅಲ್ಲಿಗೆ ಹೋದರು. ಒಂದೇ ಒಂದು ತಿದ್ದುಪಡಿಯಾಗಿರಲಿಲ್ಲ. ಚಿತ್ರ ಹಾಗೇ ಇತ್ತು. ಮರಳಿ ಬಂದು ಮೂರು ದಿನ ಬಿಟ್ಟು ಹೋದರು. ಆಗಲೂ ಹಾಗೇ ಇತ್ತು. ಹದಿನೈದು ದಿನ ಬಿಟ್ಟು ಹೋದರು. ಆಗಲೂ ಚಿತ್ರವನ್ನು ಒಬ್ಬನೇ ಒಬ್ಬ ಮುಟ್ಟಿರಲಿಲ್ಲ. ■

# ಆದಾಯಕ್ಕೆ ಇನ್ನೊಂದು ದಾರಿ

ಲೋಕಸಭಾ ಚುನಾವಣೆ ರಂಗು ಈಗ ಶುರುವಾಗುತ್ತಿದೆ. ಇದರಿಂದ ಲಾಭ ಏನು ಅಂತ ಕೇಳಬೇಡಿ. ಈಗ ಚುನಾವಣೆಯ ಪ್ರಚಾರದ ವೈಖರಿ ಬದಲಾಗಿದೆ. ಸಾಮಾಜಿಕ ತಾಣಗಳನ್ನು ಬಳಸುವುದರಲ್ಲಿ ಎಲ್ಲಾ ಪಕ್ಷಗಳು ಚಿಂತನೆ ನಡೆಸಿದೆ. ಪ್ರಿಂಟ್, ವಿದ್ಯುನ್ಮಾನ, ರೇಡಿಯೋ ಹೊರತಾಗಿ ಇನ್ನೊಂದು ಶಕ್ತಿ ಎಂದರೆ ಈ ಸಾಮಾಜಿಕ ತಾಣಗಳು. ಇದರಿಂದಾಗಿ ಫೇಸ್‌ಬುಕ್, ಟ್ವಿಟರ್, ವಾಟ್ಸ್ ಅಪ್, ಇ.ಮೇಲುಗಳಿಗೆ ಇಲ್ಲದ ಡಿಮ್ಯಾಂಡ್ ಶುರುವಾಗಿರುವುದರಿಂದ ಸಾಮಾಜಿಕ ಜಾಲವನ್ನು ತೆರೆದಿರುವ ಕಂಪೆನಿಗಳಿಗೆ ಈಗಲಿಂದಲೇ ಬಿಡುವಿಲ್ಲ.

ಕಳೆದ ತಿಂಗಳಷ್ಟೇ ಕಾಂಗ್ರೆಸ್ ಪಕ್ಷ ದೆಹಲಿಯಲ್ಲಿ ಸದಸ್ಯರ ಸಭೆ ಕರೆದು ಸಾಮಾಜಿಕ ತಾಣಗಳ ಬಳಕೆ ಹೇಗೆ ಎನ್ನುವುದರ ಬಗ್ಗೆ ಶಿಬಿರ ಮಾಡಿದೆ. ಸಾಮಾಜಿಕ ತಾಣಗಳ ಜೊತೆ ಟೂ ಬಿಟ್ಟಿದ್ದ ರಾಹುಲ್ ಗಾಂಧಿ ಕೂಡ ಇದರಲ್ಲಿ ಭಾಗವಹಿಸಿದ್ದರು. ಪ್ರಸ್ತುತ ಸಾಮಾಜಿಕ ತಾಣಗಳನ್ನು ಹೆಚ್ಚಾಗಿ ಬಳಸುತ್ತಿರುವ ಪಕ್ಷ ಎಂದರೆ ಬಿಜೆಪಿ. ಅದು ನಿಟಿಸೆಂಟ್ರಲ್ ಡಾಟ್ ಕಾಮ್ ಆರಂಭಿಸಿದೆ. ಬಿಜೆಪಿ ನಂತರದ ಸ್ಥಾನ ಕಾಂಗ್ರೆಸ್‌ಗೆ.

### ಸಾಮಾಜಿಕ ತಾಣಗಳಿಂದ ಇವರಿಗೇನು ಲಾಭ?

ಸುಮ್ಮನೆ ಲೆಕ್ಕ ಹಾಕೋಣ ಬ್ಯೂಸಿನೆಸ್ ಎಲ್ಲಿ ಶುರುವಾಗುತ್ತದೆ ಎಂದು. ನಮ್ಮಲ್ಲಿ ಮತಚಲಾವಣೆ ಮಾಡುವವರು ಸುಮಾರು 700ಮಿಲಿಯನ್ ಜನ. ದೂರಸಂಪರ್ಕ ನಿಯಂತ್ರಣ ಮಂಡಳಿ ಹೇಳುವ ಪ್ರಕಾರ ಅಂತರ್ಜಾಲ ಬಳಕೆ ಮಾಡುತ್ತಿರುವವರು 165 ಮಿಲಿಯನ್ ಜನ. ಇದರಲ್ಲಿ ಸಾಮಾಜಿಕ ತಾಣಗಳಲ್ಲಿ ತೊಡಗಿಕೊಂಡವರು 91ಮಿಲಿಯನ್ ಜನವಂತೆ. ಹೊಸದಾಗಿ 2014ರಲ್ಲಿ ಮತ ಚಲಾವಣೆ ಮಾಡುವವರು 149 ಮಿಲಿಯನ್ ಜನ. ಅಂದರೆ ಹೊಸ ಜನರೇಷನ್ ಪೂರ್ತಿ ಅಂತರ್ಜಾಲದಲ್ಲಿ ಸಿಗುವುದರಿಂದ ಪಕ್ಷಗಳಿಗೆ ಹೆಚ್ಚಾಗಿ ಶ್ರಮ ಆಗುವುದಿಲ್ಲ. ಖರ್ಚು ಕಡಿಮೆ. ಒಂದರ್ಥದಲ್ಲಿ ನೋಡುಗರ, ಬಳಕೆದಾರರ ಸಂಖ್ಯೆ ಹೆಚ್ಚಾದಷ್ಟು ಕಂಪೆನಿಗಳಿಗೆ ಹೆಚ್ಚು, ಹೆಚ್ಚು ಲಾಭ. ಇದಕ್ಕೊಂದು ಉದಾಹರಣೆ ಎಂದರೆ ನರೇಂದ್ರ ಮೋದಿ. ಅವರ ಟ್ವಿಟರ್‌ನಲ್ಲಿ ಸುಮಾರು 2.6 ಮಿಲಿಯನ್ ಹಿಂಬಾಲಕರು ಇದ್ದಾರೆ. ಸುಮಾರು 5.5ಲಕ್ಷ ಫೇಸ್ ಬುಕ್‌ನಲ್ಲಿ ಲೈಕ್ ಠಸ್ಸೆ ಒತ್ತಿದ್ದಾರೆ. ಕಾಂಗ್ರೆಸ್‌ನ ಶಶಿ ಥರೂರ್ ಗೆ 1.9ಮಿಲಿಯನ್ ಹಿಂಬಾಲಕರು, ಸುಷ್ಮಾಸ್ವರಾಜ್ ಗೆ 75ಸಾವಿರ, ಓಮರ್ ಅಬ್ದುಲ್ಲಾಗೆ 37ಸಾವಿರ ಜನ ಹಿಂಬಾಲಕರನ್ನು ಗಳಿಸಿದ್ದಾರೆ. ಇತ್ತೀಚೆಗಷ್ಟೇ ಹುಟ್ಟಿದ ಆಮ್ ಆದ್ಮಿ ಪಕ್ಷ ಭಾರತೀಯ ಸಂಜಾತರಿಂದ 20ಲಕ್ಷ ಚಂದಾ ಎತ್ತಿದ್ದು ಇದೇ ಸಾಮಾಜಿಕ ತಾಣಗಳಿಂದಲೇ. ಚುನಾವಣೆಯಿಂದಾಗಿ ಸಾಮಾಜಿಕ ತಾಣಕ್ಕೆ ಹೊಸ ಲುಕ್, ಆದಾಯ ಶುರುವಾಗಿರುವುದು ಸತ್ಯ. ಒಂದು ರೀತಿ ಈ ಡಿಜಿಟಲ್ ಮೀಡಿಯಾ ಸಂವಿಧಾನದ ಐದನೇ ಆಧಾರ ಸ್ಥಂಭ ಎನ್ನುವಂತಾಗಿದೆ. ■







ಇತ್ತೀಚೆಗೆ ಒಂದು ಸರ್ವೆ ಆಗಿದೆ. ಅದರ ಪ್ರಕಾರ ವರ್ಷಕ್ಕೆ ಮೂರು ಲಕ್ಷ ಆದಾಯ ಪಡೆಯುವ, 35 ವರ್ಷಕ್ಕಿಂತ ಕೆಳಗಿನ ವ್ಯಕ್ತಿ ಸರಾಸರಿ ಎಂದರೂ 3-4 ಕ್ರೆಡಿಟ್ ಕಾರ್ಡು ಇಟ್ಟು ಕೊಂಡಿರುತ್ತಾನೆ. 35ರಿಂದ 40ವರ್ಷದ ಒಳಗಿನವರು 3 ಕ್ರೆಡಿಟ್ ಕಾರ್ಡು, 40 ದಾಟಿದವರು ಎರಡು, 50 ದಾಟಿದ್ದರೆ ಒಂದು ಕ್ರೆಡಿಟ್ ಕಾರ್ಡು. ಅಂದರೆ ದುಡಿಯುವ ವರ್ಗ ಹೆಚ್ಚು ಸಾಲ ಮಾಡುತ್ತಿದೆ. ಸಂತೋಷ. ಆದರೆ ಕಟ್ಟುತ್ತರುವ ಬಡ್ಡಿಯ ಪ್ರಮಾಣ ಎಷ್ಟು ಶೇ. 18ರಿಂದ 36ರಷ್ಟು ಎಂಬುದು ಇಲ್ಲಿ ಗೊತ್ತಾಗುತ್ತದೆ. ಆದ್ದರಿಂದ ಸಾಲ ಮಾಡಿ, ಮಾಡುವ ಮುನ್ನ ಬಡ್ಡಿ ಎಷ್ಟೆಂದು ನೋಡಿಕೊಳ್ಳಿ.

- ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಮನೆಸಾಲಕ್ಕೆ ಶೇ.10.5ರಷ್ಟು, ಕಾರು ಸಾಲಕ್ಕೆ ಶೇ. 11.5, ವೈಯುಕ್ತಿಕ ಸಾಲ ಶೇ.14ರಷ್ಟು ಇರುವಾಗ ಕ್ರೆಡಿಟ್ ಕಾರ್ಡಿನ ಬಳಕೆ ಏಕೆ ? ಜೀವನ ಪರ್ಯಂತ ಕ್ರೆಡಿಟ್ ಕಾರ್ಡು ನಂಬಿಕೊಂಡು, ಬಡ್ಡಿ ಕಟ್ಟಿಕೊಂಡು ಬದುಕುವುದು ಕ್ಷೇಮವಲ್ಲ.
- **ಕಾರ್ಡುಗಳನ್ನು ಬಳಸಲೇ ಬಾರದೇ?**
  ಬಳಸಬೇಕು. ಬುದ್ದಿವಂತನದಿಂದ. ಯಾವುದೇ ಕಾರಣಕ್ಕೂ ಎರಡಕ್ಕಿಂತ ಹೆಚ್ಚು ಕಾರ್ಡು ಇಟ್ಟು ಕೊಳ್ಳಬೇಡಿ. ಪ್ರತಿ ತಿಂಗಳ ನಿಮ್ಮ ಆದಾಯದಲ್ಲಿ ಸೋರಿ ಹೋಗುವ ಬಡ್ಡಿಯನ್ನು ತಡೆಯುವಲ್ಲಿ ಮುಂದಾಗಿ. ಅಂದರೆ ಗಡುವಿನ ಒಳಗೆ ನೀವು ಬಡ್ಡಿ ಪಾವತಿ ಮಾಡಿ. ಅದಕ್ಕೆ ದಂಡ ಕಟ್ಟುವುದನ್ನು ಸಂಪೂರ್ಣವಾಗಿ ತಡೆಯಿರಿ. ಕಾರು, ಮನೆ, ಇತರೆ ವಸ್ತುಗಳನ್ನು ಕೊಳ್ಳಬೇಕಾದರೆ ಕ್ರೆಡಿಟ್ ಕಾರ್ಡು ಬಳಕೆ ಬೇಡ. ಬದಲಾಗಿ ಬ್ಯಾಂಕ್ ಸಾಲ ಪಡೆಯುವುದು ಲೇಸು. ಕಾರಣ. ಕ್ರೆಡಿಟ್ ಕಾರ್ಡಿಗೆ ಹಾಕುವ ದಂಡದಲ್ಲಿ ಎರಡು, ಮೂರು ತಿಂಗಳು ಬಡ್ಡಿ ಕಟ್ಟಬಹುದು.
- ಆದಷ್ಟು ಉಚಿತ ಕಾರ್ಡುಗಳನ್ನು ಬಳಸಿ. ಅಂದರೆ ಬ್ಯಾಂಕ್‌ಗಳು ತನ್ನ ಸದಸ್ಯರಿಗೆ ವಾರ್ಷಿಕವಾಗಿ ಫೀ ತೆಗೆದು ಕೊಳ್ಳದೇ ಉಚಿತ ಕಾರ್ಡು ಕೊಡುತ್ತದೆ. ಇಂಥವನ್ನು ಹೆಚ್ಚಾಗಿ ಬಳಸಿ.
- ಕೆಲವು ಕಂಪೆನಿಗಳು ಕ್ರೆಡಿಟ್ ಕಾರ್ಡುಗಳಿಗೆ ನೀವು ಬಳಸಿದ ಮೊತ್ತದ ಮೇಲೆ ಶೇ.2, 3ರಷ್ಟು ಕ್ಯಾಷ್ ಬ್ಯಾಕ್ ಆಫರ್‌ಗಳನ್ನು ಕೊಡುತ್ತವೆ. ಇದನ್ನು ಯಾವುದೇ ಕಾರಣಕ್ಕೆ ನಿರ್ಲಕ್ಷಿಸಬೇಡಿ. ಇದನ್ನು ಕೂಡಿಟ್ಟು ಕೊಂಡರೆ ಮುಂದೆ ಒಳ್ಳೆಯ ಕ್ಯಾಶ್ ಬ್ಯಾಕ್ ಸಿಗುತ್ತದೆ. ಕೆಲವು ಬ್ಯಾಂಕ್‌ಗಳು ಹಬ್ಬಗಳಂದು ಹೆಚ್ಚೆಚ್ಚು ಕ್ಯಾಶ್ ಬ್ಯಾಕ್‌ಗಳನ್ನು ಸರಿಯಾಗಿ ಬಳಸಿಕೊಳ್ಳಿ.
- ಕ್ರೆಡಿಟ್ ಕಾರ್ಡು ಬಳಸುವುದು ಅನಿವಾರ್ಯವಾದಲ್ಲಿ ಸಾಲಮಾಡಿದ ನಂತರ ಬಡ್ಡಿಯ ಗಣಿತ ಯಾವಾಗ ಪ್ರಾರಂಭವಾಗುತ್ತದೆ ಎನ್ನುವ ಮಾಹಿತಿ ಇರಲಿ. ಉದಾಹರಣೆಗೆ- ನೀವು 16ನೇ ತಾರೀಖು ಕ್ರೆಡಿಟ್ ಕಾರ್ಡಿನಲ್ಲಿ ವಸ್ತುಗಳನ್ನು ಪಡೆಯುತ್ತೀರಿ. ನಿಮ್ಮ ಬಡ್ಡಿ ಅವಧಿ 16ನೇ ತಾರೀಖಿನಿಂದ ಶುರುವಾಗುತ್ತದೆಯೋ ಅಥವಾ ಕೆಲ ಬ್ಯಾಂಕಿನ ನಿಯಮದಂತೆ ಈ ತಿಂಗಳ 10ರಿಂದ ಮುಂದಿನ ತಿಂಗಳ 10ನೇ ತಾರೀಖಿಗೆ ಮುಗಿಯುತ್ತದೆಯೋ ತಿಳಿದು ಕೊಳ್ಳಿ. ಒಂದು ಪಕ್ಷ ನೀವು 9ನೇ ತಾರೀಖು ಕಾರ್ಡಿನ ಸಾಲ ಮಾಡಿದರೆ ಒಂದೇ ದಿನಕ್ಕೆ ಒಂದು ತಿಂಗಳ ಬಡ್ಡಿ ಹೆಚ್ಚುವ ಸಾಧ್ಯತೆ ಇರುತ್ತದೆ. ■